## ೨೨.೧೨.೨೦೧೫ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೩೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೩೧ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಡಿಸೆಂಬರ್ ೨೨, ೨೦೧೫ರ ಮಂಗಳವಾರ ಬೆಳಿಗ್ಗೆ** ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಪದ್ಮಾಶೇಖರ್,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪ್ರೊ. ಕೆ.ಈ. ರಾಧಾಕೃಷ್ಣ,** ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. | **ಡಾ. ವನಿತಾ ರಾಮಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. | **ಶ್ರೀ ಕೆ. ಭೀಮಪ್ಪ,** ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. | **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ,** ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. | **ಡಾ. ಮೈಕೆಲ್,** ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೭. | **ಶ್ರೀಮತಿ ಜಯಶ್ರೀ ವಿ. ಕೊರತಿ,** ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೮. | **ವಿದ್ವಾನ್ ಸಿದ್ಧಮಲ್ಲ ಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೯. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೧೦. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಅಪರ ಮುಖ್ಯ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೫. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೬. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೮. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೯. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೦. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |
| ೧೧. | **ನಿರ್ದೇಶಕರು,** ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಪ್ರಾಸ್ತಾವಿಕ ಮಾತುಗಳೊಂದಿಗೆ ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ | ನಿರ್ಣಯ |
|---|---|---|
| ವಿಷಯ 01 | **ಪ್ರಶಾಸನ ಸಮಿತಿ 28ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 28ನೇ ಸಭೆಯು ದಿನಾಂಕ: 08.09.2015ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಪ್ರಶಾಸನ ಸಮಿತಿಯ 28ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |

| | | |
|---|---|---|
| ವಿಷಯ 02 | **'ಕಟ್ಟಡ ಸಲಹಾ ಸಮಿತಿ' ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಕಟ್ಟಡ ಸಲಹಾ ಸಮಿತಿ' ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 16.11.2015ರಂದು ನಡೆಯಿತು. ಈ ಸಭೆಯು ವಿಶ್ವವಿದ್ಯಾಲಯದ ಬೆಂಗಳೂರು ಮತ್ತು ತಿಪ್ಪಸಂದ್ರ ಗ್ರಾಮದ ಆವರಣಗಳಲ್ಲಿ ಕಟ್ಟಡಗಳನ್ನು ನಿರ್ಮಿಸುವ ಬಗೆಗೆ ಚರ್ಚೆ ನಡೆಸಿ ಅನುಮೋದನೆಯನ್ನು ನೀಡಿದೆ. ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಕಟ್ಟಡ ಸಲಹಾ ಸಮಿತಿಯ ನಡಾವಳಿಯನ್ನು ಸಭೆಯು ಅನುಮೋದಿಸಿತು. ಮತ್ತು ಆದಷ್ಟು ಬೇಗ ಕ್ರಮ ಕೈಗೊಳ್ಳಲು ಸಭೆಯು ಸೂಚಿಸಿತು.** |
| ವಿಷಯ 03 | **'ಹಣಕಾಸು ಸಮಿತಿ' 18ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 18ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 17.11.2015ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಹಣಕಾಸು ಸಮಿತಿಯ 18ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 04 | **'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2010'ಕ್ಕೆ ತಿದ್ದುಪಡಿಯನ್ನು ಮಾಡುವ ಬಗೆಗೆ.**<br>ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಅಧಿನಿಯಮ 2011ರ (2011ರ ಫೆಬ್ರವರಿ 4ರಂದು ಘನತೆವೆತ್ತ ರಾಜ್ಯಪಾಲರಿಂದ ಅಂಕಿತಗೊಂಡಿದೆ) ಅನ್ವಯ 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2010'ಕ್ಕೆ ಈ ಕೆಳಕಂಡಂತೆ ಬದಲಾವಣೆಯನ್ನು ಶಿಫಾರಸ್ಸು ಮಾಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.<br>1. ಕುಲಪತಿಗಳ ನಿವೃತ್ತಿ ವಯಸ್ಸನ್ನು 65 ರಿಂದ 67ಕ್ಕೆ ಹೆಚ್ಚಿಸುವುದು.<br>2. ಕುಲಸಚಿವರ ಹುದ್ದೆಗೆ ಕನಿಷ್ಠ 5 ವರ್ಷಗಳ ಕಾಲ ಯಾವುದೇ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಸಿಬ್ಬಂದಿಯನ್ನು ನೇಮಿಸುವುದು.<br>3. ಕುಲಸಚಿವರು (ಮೌಲ್ಯಮಾಪನ) (Registrar Evaluation) ಇವರನ್ನು ನೇಮಿಸಿಕೊಳ್ಳುವುದು. | **'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2010'ಕ್ಕೆ ತಿದ್ದುಪಡಿಯನ್ನು ಸರ್ಕಾರಕ್ಕೆ ನಿಯಮಾನುಸಾರ ಶಿಫಾರಸ್ಸು ಮಾಡಲು ಮಾಡಲು ಸಭೆಯು ಅಂಗೀಕರಿಸಿತು. ಈ ಬಗ್ಗೆ ಅಧಿನಿಯಮ ಸಮಿತಿಯ ಮೂಲಕ ಕ್ರಮವಹಿಸಬಹುದೆಂದು ಸಭೆಯು ಅಭಿಪ್ರಾಯಪಟ್ಟಿತು.** |
| ವಿಷಯ 05 | **ಇನ್‌ಫೋಸಿಸ್ ಫೌಂಡೇಶನ್‌ನ ನಗದು ಪುರಸ್ಕಾರವನ್ನು ವಿತರಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತೃತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವು 2014ರ ಮೇ 07ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಇನ್‌ಫೋಸಿಸ್ ಫೌಂಡೇಶನ್‌ನ ಅಧ್ಯಕ್ಷರಾದ ಡಾ. ಸುಧಾ ಮೂರ್ತಿ ಅವರು ಸಂಸ್ಕೃತ ವಿದ್ಯಾರ್ಥಿಗಳಿಗೆ (ವಿಶೇಷವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು) ಪ್ರೋತ್ಸಾಹವನ್ನು ನೀಡುವ ದೃಷ್ಟಿಯಿಂದ, ವಿಶ್ವವಿದ್ಯಾಲಯಕ್ಕೆ 20 ಲಕ್ಷ ರೂಪಾಯಿಗಳನ್ನು ನೀಡಿದ್ದರು. ಈ ಮೊತ್ತವನ್ನು ಬ್ಯಾಂಕಿನಲ್ಲಿ ಸ್ಥಿರನಿಧಿ ಠೇವಣಿಯಾಗಿ ಇರಿಸಲಾಗಿದ್ದು, ದತ್ತಿನಿಧಿ ಮೊತ್ತಕ್ಕೆ 2014–15 ಸಾಲಿನಲ್ಲಿ **ರೂ. 1,62,924/–** (ದಿನಾಂಕ: 31.03.2015ರಲ್ಲಿದ್ದಂತೆ) ಬಡ್ಡಿಹಣ ಸ್ವೀಕೃತಿಯಾಗಿತ್ತು. ಈ ಮೊತ್ತದಲ್ಲಿ ಎಂ.ಎ.–ವಿದ್ವದುತ್ತಮಾ ಪದವಿಯಲ್ಲಿ ಅತಿಹೆಚ್ಚು ಅಂಕ ಪಡೆದ **ನಾಲ್ಕು** ವಿದ್ಯಾರ್ಥಿಗಳಿಗೆ ತಲಾ **ರೂ. 20,000**/–ಗಳಂತೆ ಹಾಗೂ ಉಳಿದ ರೂ. 80,000/–ಗಳಲ್ಲಿ ಬಿ.ಎ.–ವಿದ್ವನ್ಮಧ್ಯಮಾ ಪದವಿಯಲ್ಲಿ ಅತಿಹೆಚ್ಚು ಅಂಕ ಪಡೆದ **ಆರು** ವಿದ್ಯಾರ್ಥಿಗಳಿಗೆ ಸಮವಾಗಿ (ತಲಾ 12,000/– ರೂಪಾಯಿಗಳಂತೆ) ವಿತರಿಸಲಾಯಿತು. ನಗದುಪುರಸ್ಕಾರಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗಿದೆ. ಈ ವಿಷಯವನ್ನು ಇನ್‌ಫೋಸಿಸ್ ಫೌಂಡೇಶನ್ನಿನ ಗಮನಕ್ಕೂ ತರಲಾಗಿತ್ತು. ಈ ವಿಷಯವನ್ನು ಪ್ರಶಾಸನ ಸಮಿತಿಯ ಅವಗಾಹನೆಗೆ ಮಂಡಿಸಿದೆ. | **ಇನ್ಫೋಸಿಸ್ ಫೌಂಡೇಷನ್‌ನ ವತಿಯಿಂದ ಸ್ಥಾಪಿಸಿರುವ ನಗದು ಪುರಸ್ಕಾರವನ್ನು ವಿತರಿಸಿರುವುದಕ್ಕೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 06 | **2015–16ನೇ ಸಾಲಿನ ರಾಜ್ಯಸ್ತರೀಯ ಸ್ಪರ್ಧೆಗಳ ಒಟ್ಟು ವೆಚ್ಚಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>2015–16ನೇ ಸಾಲಿನ ರಾಜ್ಯಸ್ತರದ ಶಾಸ್ತ್ರೀಯ ಸ್ಪರ್ಧೆಗಳನ್ನು 2015ರ ನವೆಂಬರ್ 24 ಮತ್ತು 25ರಂದು, ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜಿನಲ್ಲಿ ಆಯೋಜಿಸಲಾಗಿತ್ತು. ಈ ಸ್ಪರ್ಧೆಗಳ ಆಯೋಜನೆಗೆ ತಗಲಿದ ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ವೆಚ್ಚದ ಮೊತ್ತಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ಸಭೆಯಲ್ಲಿ ಮಂಡಿಸಿದೆ ಮತ್ತು ರಾಜ್ಯಸ್ತರದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಯಾಣಭತ್ಯೆಯನ್ನು ವಿಶ್ವವಿದ್ಯಾಲಯದಿಂದ ನೀಡಲಾಗಿದ್ದು, ಸಭೆಯ ಅನುಮೋದನೆಯನ್ನು ಕೋರಿದೆ. | **2015–16ನೇ ರಾಜ್ಯಮಟ್ಟದ ಸ್ಪರ್ಧೆಗಳ ಒಟ್ಟು ವೆಚ್ಚಕ್ಕೆ ಸಭೆಯು ಅನುಮೋದನೆ ನೀಡಿತು.** |

| | | | |
|---|---|---|---|
| **2014–15ನೇ ಸಾಲಿನ ರಾಜ್ಯಮಟ್ಟದ ಸ್ಪರ್ಧೆಗಳ ವಿವರ ಮಾರ್ಗದರ್ಶಕರ /ವಿದ್ಯಾರ್ಥಿಗಳ ವಿವರ ಹಾಗೂ ಪ್ರಯಾಣ/ದಿನಭತ್ಯೆಗಳ ವಿವರ** | | | |
| 1 | ನಡೆದ ಸ್ಪರ್ಧೆಗಳು | 36 | |
| 2 | ಭಾಗವಹಿಸಿದ ವಿದ್ಯಾರ್ಥಿಗಳ ಸಂಖ್ಯೆ | 205 | |
| 3 | ಭಾಗವಹಿಸಿದ ಮಾರ್ಗದರ್ಶಕರ ಸಂಖ್ಯೆ | 10 | |
| 4 | ಪ್ರಯಾಣ ಭತ್ಯೆ | | **1,30,384.00** |
| **ಸ್ಪರ್ಧೆಗಳ ನ್ಯಾಯನಿರ್ಣಾಯಕರ ವಿವರ ಹಾಗೂ ಗೌರವ ಸಂಭಾವನೆ** | | | |
| 1 | ನಡೆದ ಸ್ಪರ್ಧೆಗಳು | 36 | |
| 2 | ಭಾಗವಹಿಸಿದ ನಿರ್ಣಾಯಕರ ಸಂಖ್ಯೆ | 29 | |
| 3 | ನಿರ್ಣಾಯಕರ ಗೌರವ ಸಂಭಾವನೆ **ಹಾಗೂ** ಪ್ರಯಾಣ ಭತ್ಯೆ | | **42,760.00** |
| **ಸ್ಪರ್ಧೆಗಳ ಬಹುಮಾನಗಳ ವಿವರಗಳು** | | | |
| 1 | ನಡೆದ ಸ್ಪರ್ಧೆಗಳು = 36 | | |
| 2 | **ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನದ ಮೊತ್ತ –**<br>1. ಶಲಾಕಾ– (ಪ್ರ.ಬ–5000/–, ದ್ವಿ.ಬ–3000/–, ತೃ.ಬ–2000)<br>2. ಶಲಾಕಾ– (ಪ್ರ.ಬ–5000/–, ದ್ವಿ.ಬ–3000/–, ತೃ.ಬ–2000)<br>3. ಭಾಷಣ (ಪ್ರ.ಬ–5000/–, ದ್ವಿ.ಬ–3000/–, ತೃ.ಬ–2000) | | 3,64,000.00 |
| **ಸಮಾರಂಭದ ವೆಚ್ಚಗಳು** | | | |
| 1 | ಉದ್ಘಾಟನಾ ಮತ್ತು ಸಮಾರೋಪ ಸಮಾರಂಭದ ಖರ್ಚು, ವಸತಿ | | 28,820.00 |
| 2 | ಆಮಂತ್ರಣ ಪತ್ರಿಕೆ ವೆಚ್ಚ ಹಾಗೂ ಪ್ರಮಾಣ ಪತ್ರ ವೆಚ್ಚ, ಬ್ಯಾನರ್ | | 4,440.00 |
| 3 | ಮಾರ್ಗದರ್ಶಕರ/ವಿದ್ಯಾರ್ಥಿಗಳ ಪ್ರಯಾಣ ಭತ್ಯೆಗಳ ವಿವರ | | **1,30,384.00** |
| 4 | ಸ್ಪರ್ಧೆಗಳ ನ್ಯಾಯನಿರ್ಣಾಯಕರ ಗೌರವಧನ | | 42,760.00 |
| 5 | ಸ್ಪರ್ಧೆಗಳ ಬಹುಮಾನಗಳ ವಿವರ | | 3,64,000.00 |
| **ಒಟ್ಟು ಖರ್ಚು** | | | **5,70,404.00** |

| | | |
|---|---|---|
| ವಿಷಯ 07 | **'ರಾಷ್ಟ್ರೀಯ ಸೇವಾ ಯೋಜನೆ' ವತಿಯಿಂದ ಪ್ರಶಸ್ತಿ ನೀಡುವ ಬಗೆಗೆ.**<br>ಪ್ರಶಾಸನ ಸಮಿತಿ ಅನುಮೋದನೆಯ ಮೇರೆಗೆ ವಿಶ್ವವಿದ್ಯಾಲಯದಲ್ಲಿ 2014–15ನೇ ಸಾಲಿನಿಂದ 'ರಾಷ್ಟ್ರೀಯ ಸೇವಾ ಯೋಜನೆ'ಯನ್ನು ಪ್ರಾರಂಭಿಸಿದ್ದು, ಪ್ರಸ್ತುತ 1000 ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಎನ್.ಎಸ್.ಎಸ್. ವಿದ್ಯಾರ್ಥಿಗಳಿಗಾಗಿ ಈಗಾಗಲೇ ವಿಶೇಷ ಶಿಬಿರ ಹಾಗೂ ವಿಶ್ವವಿದ್ಯಾಲಯ ಮಟ್ಟದ ಶಿಬಿರವನ್ನು ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ, ಎನ್.ಎಸ್.ಎಸ್. ಸ್ವಯಂಸೇವಕರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಹಾಗೂ ಅವರ ಸೇವೆಗಾಗಿ ಎನ್.ಎಸ್.ಎಸ್. ಯೋಜನೆಯ ಮುಖಾಂತರ ಪ್ರಶಸ್ತಿಗಳನ್ನು ನೀಡಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ನೀಡುವ ಪ್ರಶಸ್ತಿಗಳಿಗೆ ಆರ್ಥಿಕ ನೆರವು ನೀಡುವಂತೆ ಮಠ–ಮಾನ್ಯಗಳಿಗೆ ಕೋರಲಾಗುವುದು. | **'ರಾಷ್ಟ್ರೀಯ ಸೇವಾ ಯೋಜನೆ'ಯ ವತಿಯಿಂದ ಪುರಸ್ಕಾರವನ್ನು ನೀಡುತ್ತಿರುವುದಕ್ಕೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 08 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಐದನೇ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹದ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಐದನೇ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹವನ್ನು ದಿನಾಂಕ: 26.08.215ರಂದು ಮಧ್ಯಾಹ್ನ 3.00 ಗಂಟೆಗೆ ಶಿಕ್ಷಕರ ಸದನದಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಸಾರಸ್ವತ ಅತಿಥಿಗಳಾಗಿ ಶ್ರೀ ತರಳಬಾಳು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಮುಖ್ಯ ಅತಿಥಿಯಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರೀ ಅವರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಆಯೋಜನೆಗಾಗಿ ರೂ. 1,88,000/–ಗಳನ್ನು ಅಂದಾಜು ವೆಚ್ಚಕ್ಕೆ ದಿನಾಂಕ: 30.06.2015ರಂದು ನಡೆದ ಪ್ರಶಾಸನ ಸಮಿತಿ 27 ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಕಾರ್ಯಕ್ರಮಕ್ಕೆ ಒಟ್ಟು ರೂ. 1,90,493/–ಗಳು ಖರ್ಚಾಗಿರುತ್ತದೆ. **ಹೆಚ್ಚುವರಿಯಾಗಿ ಖರ್ಚಾದ ರೂ. 2,493/–ಗಳಿಗೆ ಸಭೆಯ ಅನುಮೋದನೆಯನ್ನು ಕೋರಿದೆ.** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವತಿಯಿಂದ ನಡೆಸಿದ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹದ ಒಟ್ಟು ವೆಚ್ಚಕ್ಕೆ ಮತ್ತು ಹೆಚ್ಚುವರಿಯಾಗಿ ಖರ್ಚು ಮಾಡಿದ ಮೊತ್ತಕ್ಕೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 09 | **ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗಾಗಿ 2015–16ನೇ ಸಾಲಿನ ವಲಯಮಟ್ಟದ ಹಾಗೂ ರಾಜ್ಯಮಟ್ಟದ ಸ್ಪರ್ಧೆಗಳನ್ನು ನಡೆಸುವ ಬಗೆಗೆ.**<br>ರಾಜ್ಯದ ಸಂಸ್ಕೃತ ಪಾಠಶಾಲೆ/ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳ ವಿದ್ಯಾರ್ಥಿಗಳಿಗಾಗಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು 2015–16ನೇ ಸಾಲಿನ ವಲಯಮಟ್ಟದ ಸ್ಪರ್ಧೆಗಳನ್ನು ದಿನಾಂಕ: 20.12.2015ರ ಒಳಗಾಗಿ ನಡೆಸಲು | **2015–16ನೇ ಸಾಲಿನಲ್ಲಿ ಸಂಸ್ಕೃತ ಪಾಠಶಾಲಾ ವಿದ್ಯಾರ್ಥಿಗಳಿಗಾಗಿ ನಡೆಸುವ ವಲಯಮಟ್ಟದ ಮತ್ತು ರಾಜ್ಯಮಟ್ಟದ ಸ್ಪರ್ಧೆಗಳನ್ನು** |

| | | |
|---|---|---|
| | ಆದೇಶಿಸಲಾಗಿದ್ದು, ಸ್ಪರ್ಧೆಗಳು ನಡೆಯುತ್ತಿವೆ. ಆರು ವಲಯಗಳಲ್ಲಿ ಎರಡು ಹಂತಗಳಲ್ಲಿ ಸ್ಪರ್ಧೆಗಳು ನಡೆಯುತ್ತಿದ್ದು, ಈ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ವಿವಿಧ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ರಾಜ್ಯಮಟ್ಟದ ಸ್ಪರ್ಧೆಗಳನ್ನು 2015ನೇ ಡಿಸೆಂಬರ್ 30ರಂದು ನಡೆಸಲು ಉದ್ದೇಶಿಸಿದೆ. ಈ ಸ್ಪರ್ಧೆಗಳನ್ನು ನಡೆಸಲು ರೂ. 3,70,000/–(ಮೂರು ಲಕ್ಷದ ಎಪ್ಪತ್ತು ಸಾವಿರ ರೂಪಾಯಿ)ಗಳನ್ನು ಮುಂಗಡ ಪಡೆಯಲಾಗಿದೆ. ಈ ಸ್ಪರ್ಧೆಗಳಿಗೆ ಖರ್ಚಾಗುವ ಒಟ್ಟು ವೆಚ್ಚದ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲಾಗುವುದು. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. | **ನಡೆಸಲು ಹಾಗೂ ಇದಕ್ಕೆ ತಗಲುವ ವೆಚ್ಚಕ್ಕೆ ಸಭೆಯು ಅನುಮೋದಿಸಿತು.** |
| ವಿಷಯ 10 | **ನೂತನ ಪಠ್ಯಪುಸ್ತಕದ ಲೋಕಾರ್ಪಣ ಸಮಾರಂಭ ಹಾಗೂ ಪಾಠಶಾಲಾ ಶಿಕ್ಷಕರಿಗೆ ನಡೆಸಿದ ನೂತನ ಪಠ್ಯಕ್ರಮದ ತರಬೇತಿ ಶಿಬಿರದ ವೆಚ್ಚಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**<br>ಸಂಸ್ಕೃತ ಪ್ರಥಮಾ ತರಗತಿ ಮೂರನೇ ವರ್ಷದ ನೂತನ ಪಠ್ಯಪುಸ್ತಕ 'ಶುಭಾ'ವನ್ನು ಮುದ್ರಿಸಲಾಗಿದ್ದು, ಈ ಪಠ್ಯಪುಸ್ತಕದ ಲೋಕಾರ್ಪಣ ಸಮಾರಂಭ ಹಾಗೂ ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ಈ ನೂತನ ಪಠ್ಯಕ್ರಮದ ತರಬೇತಿ ಶಿಬಿರವನ್ನು 2015ನೇ ಡಿಸೆಂಬರ್ 14 ಮತ್ತು 15ರಂದು ಎರಡು ದಿನಗಳ ಕಾಲ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ರೂ. 3,75,000/–ಗಳನ್ನು ಮುಂಗಡವಾಗಿ ಪಡೆಯಲಾಗಿತ್ತು. ಈ ಮೊತ್ತದಲ್ಲಿ **ರೂ. 1,55,401/–**ಗಳು ಖರ್ಚಾಗಿದ್ದು, ಈ ಮೊತ್ತಕ್ಕೆ ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಯನ್ನು ಕೋರಿದೆ. | **ಸಂಸ್ಕೃತ ಪಾಠಶಾಲಾ ಶಿಕ್ಷಕರಿಗೆ ನಡೆಸಿದ ಕಾರ್ಯಾಗಾರದ ಬಗೆಗೆ ಸಭೆಯು ಮೆಚ್ಚುಗೆ ವ್ಯಕ್ತಪಡಿಸಿತು. ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಕ್ರಮವನ್ನು ನಡೆಸಿರುವುದನ್ನು ಅಭಿನಂದಿಸಿ ಅನುಮೋದನೆ ನೀಡಿತು.** |
| ವಿಷಯ 11 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪಠ್ಯಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ತರಗತಿಗಳ ಪಠ್ಯಪುಸ್ತಕಗಳನ್ನು ಪ್ರಸಾರಾಂಗದ ವತಿಯಿಂದ 2015–16ನೇ ಸಾಲಿನಲ್ಲಿ ಮರುಮುದ್ರಣ ಮಾಡಿಸಲಾಗಿದ್ದು, ಮಾನ್ಯ ಕುಲಪತಿಗಳ ಆದೇಶದಂತೆ, ಈ ಪುಸ್ತಕಗಳನ್ನು 2015ನೇ ಡಿಸೆಂಬರ್ 30ರ ಒಳಗಾಗಿ ಖರೀದಿಸುವವರಿಗೆ ಶೇ. 15 ರಿಯಾಯಿತಿ ಹಾಗೂ ಆನಂತರದಲ್ಲಿ ಖರೀದಿಸುವವರಿಗೆ ಶೇ. 10 ರಿಯಾಯಿತಿ ನೀಡಲಾಗುತ್ತಿದೆ. ಪಠ್ಯಪುಸ್ತಕಗಳನ್ನು ರಿಯಾಯಿತಿ ನೀಡಿ ಮಾರಾಟ ಮಾಡುವುದಕ್ಕೆ ಪ್ರಶಾಸನ ಸಮಿತಿಯನ್ನು ಅನುಮೋದನೆಯನ್ನು ಕೋರಿದೆ. | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಪಾಠ್ಯಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ಸಭೆಯು ಅನುಮೋದನೆ ನೀಡಿತು.** |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:** | | |
| ವಿಷಯ 01 | **ಪ್ರಶಿಕ್ಷಣ ಪರಿಷತ್ತಿನ 15ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಿಕ್ಷಣ ಪರಿಷತ್ತಿನ 15ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 30.06.2015ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. | **ಪ್ರಶಿಕ್ಷಣ ಪರಿಷತ್ತಿನ 15ನೇ ಸಭೆಯ ನಡಾವಳಿಯನ್ನು ಸಭೆಯು ಅನುಮೋದಿಸಿತು.** |
| ವಿಷಯ 02 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತಿಪ್ಪಸಂದ್ರ ಆವರಣ(ಕ್ಯಾಂಪಸ್)ದ ಮಾಸ್ಟರ್ ಪ್ಲಾನ್ ತಯಾರಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಕರ್ನಾಟಕ ಸರ್ಕಾರವು ಮಂಜೂರು ಮಾಡಿರುವ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹೋಬಳಿ ಮತ್ತು ಗ್ರಾಮದಲ್ಲಿರುವ 100 ಎಕರೆ ಜಮೀನಿನಲ್ಲಿ ನೂತನ ಕಟ್ಟಡಗಳನ್ನು ನಿರ್ಮಾಣ ಮಾಡುವ ಸಂಬಂಧ ಮಾಸ್ಟರ್ ಪ್ಲಾನ್ ಅನ್ನು ತಯಾರಿಸಬೇಕಾಗಿದೆ. ಈ ಸಂಬಂಧ ಸರ್ಕಾರದ ವಾಸ್ತುಶಿಲ್ಪಿಗಳಿಂದ ಪ್ರಸ್ತಾವನೆ ಪಡೆದು ಮುಂದಿನ ಕ್ರಮಕೈಗೊಳ್ಳಬೇಕಾಗಿದೆ. ಸಭೆಯ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತಿಪ್ಪಸಂದ್ರ ಆವರಣದಲ್ಲಿ ನಿರ್ಮಿಸಲು ಬಯಸಿರುವ ಕಟ್ಟಡಕ್ಕೆ ಸಂಬಂಧಿಸಿದಂತೆ ಮಾಸ್ಟರ್ ಪ್ಲಾನ್ ತಯಾರಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 03 | **'ಸಂಸ್ಕೃತ ಗ್ರಂಥಪುರಸ್ಕಾರ–2014' ಪ್ರದಾನ ಹಾಗೂ 'ಸಾಂಖ್ಯಪ್ರವಚನಭಾಷ್ಯ' ಗ್ರಂಥಲೋಕಾರ್ಪಣ ಸಮಾರಂಭದ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **'ಸಂಸ್ಕೃತ ಗ್ರಂಥಪುರಸ್ಕಾರ–2014' ಪ್ರದಾನ ಹಾಗೂ 'ಸಾಂಖ್ಯಪ್ರವಚನಭಾಷ್ಯ' ಗ್ರಂಥಲೋಕಾರ್ಪಣ ಸಮಾರಂಭ**ವನ್ನು ದಿನಾಂಕ: 22.12.2015ರ ಮಂಗಳವಾರ ಸಂಜೆ 5.00 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 'ಶ್ರೀಕೃಷ್ಣರಾಜ ಪರಿಷನ್ಮಂದಿರ'ದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಮಾರಂಭದಲ್ಲಿ ಏಳು ಸಂಸ್ಕೃತ ಗ್ರಂಥಗಳಿಗೆ ಗ್ರಂಥಪುರಸ್ಕಾರವನ್ನು ನೀಡಲಾಗುತ್ತಿದೆ. ಈ ಪುರಸ್ಕಾರವು ರೂ. 10,000/– (ಹತ್ತು ಸಾವಿರ ರೂಪಾಯಿ) ನಗದು, ಸ್ಮರಣಿಕೆಗಳನ್ನು ಹೊಂದಿದೆ. 'ಸಾಂಖ್ಯಪ್ರವಚನಭಾಷ್ಯ' ಗ್ರಂಥದ | **'ಸಂಸ್ಕೃತ ಗ್ರಂಥಪುರಸ್ಕಾರ–2014' ಪ್ರದಾನ ಮಾಡುವ ಮೂಲಕ ಸಂಸ್ಕೃತ ಲೇಖಕರನ್ನು ವಿಶ್ವವಿದ್ಯಾಲಯವು ಪ್ರೋತ್ಸಾಹಿಸುತ್ತಿರುವ ಬಗೆಗೆ ಸಭೆಯು ಮೆಚ್ಚುಗೆ ವ್ಯಕ್ತಪಡಿಸಿ, ಗ್ರಂಥಪುರಸ್ಕಾರ ಮತ್ತು ಲೋಕಾರ್ಪಣ ಸಮಾರಂಭ ನಡೆಸಲು** |

| | | |
|---|---|---|
| | ಅನುವಾದಕರಿಗೆ ಗೌರವ ಸಂಭಾವನೆ ರೂ. 9590/–ಗಳನ್ನು ನೀಡಲಾಗುತ್ತಿದ್ದು, ಸಮಾರಂಭಕ್ಕೆ ತಗಲುವ ಅಂದಾಜುವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ತಗಲುವ ಒಟ್ಟು ವೆಚ್ಚಕ್ಕೆ ಅನುಮೋದನೆ ನೀಡಿತು.** |
| ವಿಷಯ 04 | **ಯೋಗ ಸರ್ಟಿಫಿಕೇಟ್ ಹಾಗೂ ಯೋಗ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಸಂಬಂಧ ಅಧಿಸೂಚನೆಯನ್ನು ಹೊರಡಿಸುವ ಬಗೆಗೆ.**<br>ದಿನಾಂಕ: 02.09.2015ರಂದು ನಡೆದ ಪ್ರಶಿಕ್ಷಣ ಪರಿಷತ್ 13ನೇ ಸಭೆಯಲ್ಲಿ ವಿಶ್ವವಿದ್ಯಾಲಯದ ಎಲ್ಲ ನಿಕಾಯಗಳಲ್ಲಿ ಸರ್ಟಿಫಿಕೇಟ್ ಹಾಗೂ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ಆರಂಭಿಸಲು ಅನುಮತಿ ಪಡೆಯಲಾಗಿದೆ. ದಿನಾಂಕ: 09.03.2015ರಂದು ನಡೆದ ಪ್ರಶಿಕ್ಷಣ ಪರಿಷತ್ 14ನೇ ಸಭೆಯಲ್ಲಿ ಯೋಗ ವಿಷಯದಲ್ಲಿ ಸರ್ಟಿಫಿಕೇಟ್ ಹಾಗೂ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಿರುವ ಅಥವಾ ಪ್ರಾರಂಭಿಸಲಿರುವ ಸಂಸ್ಥೆಗಳು ಮಾನ್ಯತೆಯನ್ನು ಬಯಸಿದಲ್ಲಿ ವಿಶ್ವವಿದ್ಯಾಲಯವು ಮಾನ್ಯತೆಯನ್ನು ನೀಡಬಹುದಾಗಿದೆ ಎಂದು ಸಭೆಯು ಅನುಮೋದಿಸಿತು. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯಲ್ಲಿ, ಯೋಗ ವಿಶ್ವವಿದ್ಯಾಲಯದ ಕುಲಪತಿಗಳು ಸದಸ್ಯರಾಗಿದ್ದ ಸಮಿತಿಯನ್ನು ರಚಿಸಿ, ಯೋಗ ಸರ್ಟಿಫಿಕೇಟ್, ಡಿಪ್ಲೋಮಾ, ಬಿ.ಎ. ಹಾಗೂ ಎಂ.ಎ. ಪದವಿಗಳಿಗೆ ಪಠ್ಯಕ್ರಮವನ್ನು ಸಿದ್ಧಪಡಿಸಿದ್ದು, ಈ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯು ನಿರ್ದೇಶಿಸಿತು. ಈ ಹಿನ್ನೆಲೆಯಲ್ಲಿ, ಯೋಗ ಸರ್ಟಿಫಿಕೇಟ್ ಹಾಗೂ ಯೋಗ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುವ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಮಾನ್ಯತೆ ನೀಡುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಲು ಅನುಮತಿಗಾಗಿ ಮಂಡಿಸಿದೆ. ಮಾನ್ಯತೆಯನ್ನು ಪಡೆಯಲು ಇಚ್ಛಿಸುವ ಸಂಸ್ಥೆಗಳಿಗೆ ಮಾನ್ಯತಾ ಶುಲ್ಕ ರೂ. 5,000/–; ವಾರ್ಷಿಕ ಶುಲ್ಕ ರೂ. 5,000/– ಮತ್ತು ಪರೀಕ್ಷಾ ಶುಲ್ಕವಾಗಿ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ರೂ. 1500/– ಹಾಗೂ ಡಿಪ್ಲೋಮಾ ಕೋರ್ಸ್‌ಗಳಿಗೆ ರೂ. 2000/– ನಿಗದಿಪಡಿಸಬಹುದಾಗಿದೆ. | **ಯೋಗ ಸರ್ಟಿಫಿಕೇಟ್ ಹಾಗೂ ಯೋಗ ಪಿ.ಜಿ. ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸುವ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಸಂಬಂಧ ಅಧಿಸೂಚನೆಯನ್ನು ಹೊರಡಿಸಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 05 | **ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಪಾಠ್ಯಪುಸ್ತಕಗಳನ್ನು ತಯಾರಿಸುವ ಬಗೆಗೆ.**<br>2013–14ನೇ ಸಾಲಿನಿಂದ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ತರಗತಿಗಳಿಗೆ ನೂತನ ಪಾಠ್ಯಕ್ರಮವನ್ನು ತಯಾರಿಸಲಾಗಿದೆ. ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಈ ಪಾಠ್ಯಕ್ರಮಗಳಿಗೆ ಸಂಬಂಧಿಸಿದ ಪಾಠ್ಯಪುಸ್ತಕಗಳನ್ನು ರಚಿಸಬೇಕಾಗಿದೆ. ಶಾಸ್ತ್ರನಿಕಾಯದ 'ಅಲಂಕಾರಶಾಸ್ತ್ರ' ವಿಭಾಗದಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದರಿಂದ, ಮೊದಲನೇ ಹಂತದಲ್ಲಿ ಅಲಂಕಾರಶಾಸ್ತ್ರಕ್ಕೆ ಸಂಬಂಧಿಸಿದ ಪಾಠ್ಯಪುಸ್ತಕಗಳನ್ನು ರಚಿಸಲು ವಿಶ್ವವಿದ್ಯಾಲಯವು ನಿರ್ಣಯಿಸಿದೆ. ಈ ಪಾಠ್ಯಪುಸ್ತಕಗಳನ್ನು ತಯಾರಿಸುವ ಬಾಹ್ಯ ವಿಷಯತಜ್ಞರಿಗೆ ನಿಯಮಾನುಸಾರ ಗೌರವಧನವನ್ನು ನೀಡಬಹುದಾಗಿದೆ. ಈ ಪಾಠ್ಯಪುಸ್ತಕಗಳನ್ನು ರಚಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. | **ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಪಾಠ್ಯಪುಸ್ತಕಗಳನ್ನು ಸಿ.ಬಿ.ಸಿ.ಎಸ್. ಮಾದರಿಯಲ್ಲಿ ತಯಾರಿಸಲು ಸಭೆಯು ಸೂಚಿಸಿತು. ಮತ್ತು ಈ ಕಾರ್ಯವನ್ನು ವಿಶ್ವವಿದ್ಯಾಲಯದ ಬೋಧಕ ಸಿಬ್ಬಂದಿ ಮುಖಾಂತರ ನಡೆಸಲು ಸಭೆಯು ನಿರ್ಣಯಿಸಿತು.** |
| ವಿಷಯ 06 | **ವಿವಿಧ ನಿಕಾಯಗಳಲ್ಲಿ 2015–16ನೇ ಸಾಲಿನ ಜನವರಿ–2016ರಿಂದ ಪಿ.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗೆಗೆ.**<br>ದಿನಾಂಕ: 30.06.2015ರಂದು ನಡೆದ ಪ್ರಶಿಕ್ಷಣ ಪರಿಷತ್ (ಅಕಾಡೆಮಿಕ್ ಕೌನ್ಸಿಲ್) 15ನೇ ಸಭೆಯಲ್ಲಿ 2014–15ನೇ ಸಾಲಿನಿಂದ ಭಾಷಾ, ಶಾಸ್ತ್ರ, ವೇದಾಂತ ಹಾಗೂ ವೇದ ನಿಕಾಯಗಳಲ್ಲಿ ನೂತನವಾಗಿ ಸರ್ಟಿಫಿಕೇಟ್ ಹಾಗೂ ಡಿಪ್ಲೋಮಾ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ಪಡೆಯಲಾಗಿದೆ (ವಿಷಯ ಸಂಖ್ಯೆ 4). ಅದರಂತೆ ಈ ಸಾಲಿನಲ್ಲಿ ವೇದಾಂತ ನಿಕಾಯದ ದ್ವೈತವೇದಾಂತ ವಿಭಾಗದಲ್ಲಿ 2 ಸರ್ಟಿಫಿಕೇಟ್ ಕೋರ್ಸ್‌ಗಳು, ಭಾಷಾನಿಕಾಯದಲ್ಲಿ ಸಂಸ್ಕೃತ ಭಾಷೆಯ 1 ಸರ್ಟಿಫಿಕೇಟ್ ಕೋರ್ಸ್ ನಡೆಯುತ್ತಿದ್ದು, ಒಟ್ಟು 3 ಸರ್ಟಿಫಿಕೇಟ್ ಕೋರ್ಸ್‌ಗಳು ಹಾಗೂ ಭಾಷಾನಿಕಾಯದಲ್ಲಿ ಹಸ್ತಪ್ರತಿಶಾಸ್ತ್ರ ಪಿ.ಜಿ. ಡಿಪ್ಲೋಮಾ ತರಗತಿಗಳನ್ನು ನಡೆಸಲಾಗುತ್ತಿದೆ. 2015–16ನೇ ಸಾಲಿನ ಜನವರಿ–2016ರಿಂದ ಎಲ್ಲ ಪಿ.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಏಕರೂಪವಾಗಿ ನಡೆಸಬೇಕು ಎಂದು ವಿಶ್ವವಿದ್ಯಾಲಯವು ನಿರ್ಧರಿಸಿದೆ. ಈ ಕೋರ್ಸಗಳನ್ನು ಏಕರೂಪವಾಗಿ ನಡೆಸಲು ತೆಗೆದುಕೊಂಡ ನಿರ್ಣಯಗಳನ್ನು ಇದರೊಂದಿಗೆ ಲಗತ್ತಿಸಿದೆ. ವಿಶ್ವವಿದ್ಯಾಲಯವು ಮುಂದಿನ ಸಾಲಿನಿಂದ ವಿವಿಧ ನಿಕಾಯಗಳಲ್ಲಿ ಪ್ರಾರಂಭಿಸಲು ಇಚ್ಛಿಸಿರುವ ಪಿ.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ವಿವರಗಳನ್ನು ಲಗತ್ತಿಸಿದೆ. ಸಭೆಯ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. | **ಜನವರಿ–2016ರಿಂದ ವಿವಿಧ ನಿಕಾಯಗಳಲ್ಲಿ 2015–16ನೇ ಸಾಲಿನ ಪಿ.ಜಿ. ಡಿಪ್ಲೋಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಭೆಯು ಒಪ್ಪಿಗೆ ಸೂಚಿಸಿತು.** |

| | | |
|---|---|---|
| ವಿಷಯ 07 | **ವಿಶ್ವವಿದ್ಯಾಲಯದ ಸ್ನಾತಕ/ಸ್ನಾತಕೋತ್ತರ ಪದವಿಗಳ ಹೆಸರನ್ನು ಬದಲಾಯಿಸುವ ಬಗೆಗೆ.**<br>ವಿಶ್ವವಿದ್ಯಾಲಯ ಅನುದಾನ ಆಯೋಗದ ಪತ್ರ ಸಂಖ್ಯೆ DOF No 5-1/2013 (CPP-11), ದಿನಾಂಕ: 11.09.2015ರ ಅನುಸಾರ ದೇಶದಲ್ಲಿನ ಎಲ್ಲ ಸಂಸ್ಕೃತ ವಿಶ್ವವಿದ್ಯಾಲಯಗಳ ಸ್ನಾತಕ/ಸ್ನಾತಕೋತ್ತರ ಪದವಿಗಳ ಹೆಸರುಗಳನ್ನು ಏಕರೂಪವಾಗಿ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ. ದಿನಾಂಕ: 09.03.2015 ನಡೆದ ಪ್ರಶಿಕ್ಷಣ ಪರಿಷತ್‌ನ 14ನೇ ಸಭೆಯಲ್ಲಿ ಬಿ.ಎ–ವಿದ್ವನ್ಮಧ್ಯಮಾ ಪದವಿಯ ಹೆಸರನ್ನು ಬದಲಾಯಿಸಿ ಶಾಸ್ತ್ರೀ–ಬಿ.ಎ ಎಂಬುದಾಗಿ ಪದವಿಯನ್ನು ನೀಡಬೇಕು; ಎಂ.ಎ–ವಿದ್ವದುತ್ತಮಾ ಎಂಬ ಪದವಿಯನ್ನು ಆಚಾರ್ಯ/ವಿದ್ವಾನ್/ಎಂ.ಎ. ಎಂಬುದಾಗಿ ನೀಡಬೇಕೆಂದು ಸೂಚಿಸಿತು. ಇದರಿಂದ ರಾಷ್ಟ್ರಸ್ತರದಲ್ಲಿ ಇರುವ ವಿಶ್ವವಿದ್ಯಾಲಯಗಳ ಪದವಿಗೆ ಸಮನಾದ ಪದವಿಯನ್ನು ನಮ್ಮ ವಿಶ್ವವಿದ್ಯಾಲಯವೂ ನೀಡಿದಂತಾಗುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು (ವಿಷಯ–9). ಈ ಹಿನ್ನೆಲೆಯಲ್ಲಿ, ಈಗ ವಿಶ್ವವಿದ್ಯಾಲಯದ ಸ್ನಾತಕ ಪದವಿಗಳ ಹೆಸರನ್ನು B.A. SAMSKRIT (शास्त्री) ಎಂದು ಹಾಗೂ ಸ್ನಾತಕೋತ್ತರ ಪದವಿಯ ಹೆಸರನ್ನು M.A. SAMSKRIT (आचार्य) ಎಂದು ಬದಲಿಸಲು ಪ್ರಸ್ತಾವಿಸಲಾಗಿದೆ. | **ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳ ಹೆಸರನ್ನು ಬದಲಾಯಿಸುವ ಬಗೆಗೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 08 | **ವಿಶ್ವವಿದ್ಯಾಲಯದ ಅಧಿಕಾರಿಗಳ ಗೃಹಕಛೇರಿ ವೆಚ್ಚವನ್ನು ಪಾವತಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ಹಣಕಾಸು ಆಧಿಕಾರಿಗಳಿಗೆ ಪ್ರತಿ ತಿಂಗಳು ಗೃಹಕಛೇರಿ ವೆಚ್ಚವನ್ನು ಪಾವತಿಸಬಹುದಾಗಿದೆ. ಮೈಸೂರು ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ ಮುಂತಾದ ಅನೇಕ ವಿಶ್ವವಿದ್ಯಾಲಯಗಳಲ್ಲಿ ವಿಶ್ವವಿದ್ಯಾಲಯದ ಪ್ರಮುಖ ಅಧಿಕಾರಿಗಳಿಗೆ ಪ್ರತಿ ತಿಂಗಳು ರೂ. 3000/– ಗೃಹಕಛೇರಿ ವೆಚ್ಚವನ್ನು ಪಾವತಿಸಲಾಗುತ್ತಿದೆ. ಅದರಂತೆ, ನಮ್ಮ ವಿಶ್ವವಿದ್ಯಾಲಯದಲ್ಲಿಯೂ ಕೂಡ ರೂ. 3000/– ಗೃಹಕಛೇರಿ ವೆಚ್ಚವನ್ನು ಪ್ರತಿ ತಿಂಗಳು ಪಾವತಿಸಬಹುದಾಗಿದೆ. ಸಭೆಯ ಅನುಮೋದನೆಗಾಗಿ ಮಂಡಿಸಿದೆ | **ವಿಶ್ವವಿದ್ಯಾಲಯದ ಅಧಿಕಾರಿಗಳ ಗೃಹಕಛೇರಿ ವೆಚ್ಚವನ್ನು ಪಾವತಿಸಲು ಸಭೆಯು ಅನುಮೋದಿಸಿತು.** |
| ವಿಷಯ 09 | **ಶ್ರೀ ಶ್ರೀನಿವಾಸಮೂರ್ತಿ, 'ಡಿ' ಗ್ರೂಪ್ ನೌಕರ, ಇವರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜಿಸವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಛೇರಿಯಲ್ಲಿ 'ಡಿ' ಗ್ರೂಪ್ ನೌಕರನಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಶ್ರೀನಿವಾಸಮೂರ್ತಿ, ಇವರು ವೈಯಕ್ತಿಕ ಕಾರಣಗಳಿಗಾಗಿ ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಕೋರಿ ಮಾನ್ಯ ಕುಲಪತಿಗಳಿಗೆ ಪತ್ರ ನೀಡಿರುತ್ತಾರೆ. ಸದರಿಯವನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜನೆ ಮೇರೆಗೆ ಕಳುಹಿಸಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ | **ಶ್ರೀ ಶ್ರೀನಿವಾಸಮೂರ್ತಿ, 'ಡಿ' ಗ್ರೂಪ್ ನೌಕರ, ಇವರನ್ನು ತುಮಕೂರು ವಿಶ್ವವಿದ್ಯಾಲಯಕ್ಕೆ ನಿಯೋಜಿಸಲು ಸಭೆಯು ಅನುಮೋದಿಸಿತು.** |

| | |
|---|---|
| **s/d** | **s/d** |
| **ಪ್ರೊ. ವೈ.ಎಸ್. ಸಿದ್ದೇಗೌಡ** | **ಪ್ರೊ. ಪದ್ಮಾಶೇಖರ್** |
| ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |